

ನಕ್ಕುಬಿಡಿ



ತರುಣಿ: ಅಪ್ಪಾ, ನಾನು ದೂರದ ಹುಡುಗನೊರ್ವನನ್ನು ಪ್ರೀತಿಸುತ್ತಿದ್ದೇನೆ. ಅವನು ಲಂಡನ್‌ನಲ್ಲಿ ವಾಸವಾಗಿದ್ದು ನಾವೊಂದು ಡೇಟಿಂಗ್ ವೆಬ್‌ಸೈಟ್‌ನಲ್ಲಿ ಭೇಟಿಯಾದೆವು. ಫೇಸ್‌ಬುಕ್‌ನಲ್ಲಿ ಸ್ನೇಹಿತರಾದೆವು, ವಾಟ್ಸಪ್‌ನಲ್ಲಿ ಸಂಭಾಷಿಸಿದೆವು. ಸ್ಕೈಪ್‌ನಲ್ಲಿ ಪ್ರೀತಿ ತೋಡಿಕೊಂಡೆವು ಮತ್ತು 2 ತಿಂಗಳಿಂದೀಚೆಗೆ ವೈಬರ್ ಮುಖಾಂತರ ಸಂಬಂಧ ಬೆಳೆಸಿದ್ದೇವೆ. ನಮಗೆ ನಿಮ್ಮ ಆಶೀರ್ವಾದ ಬೇಕು...

ಅಪ್ಪ: ಒಳ್ಳೆಯದು ಮಗಳೇ, ನೀವೀಗ ಟ್ವಿಟ್ಟರ್‌ನಲ್ಲಿ ವಿವಾಹವಾಗಿ, ಆನ್‌ಲೈನ್‌ನಲ್ಲಿ ಮಧುಚಂದ್ರ ಪೂರೈಸಿ, ಇ-ಬೇಯ್‌ನಲ್ಲಿ ಮಕ್ಕಳನ್ನು ಪಡೆಯಿರಿ, ಜಿ-ಮೇಲ್ ಮುಖಾಂತರ ಅವರನ್ನು ಕಳಿಸಿಕೊಡಿ ಮತ್ತು ಪತಿ ಸಾಕೆನಿಸಿದರೆ ನೀನವನನ್ನು ಓ ಎಲ್ ಎಕ್ಸ್‌ನಲ್ಲಿ ಮಾರಿಬಿಡು!

## ಗುರುತು!

ಕಿಟ್ಟು ಮತ್ತು ಪುಟ್ಟು ಸೇರಿ 2 ಕುದುರೆಗಳನ್ನು ಖರೀದಿಸಿದರು. ಆದರೆ ಯಾವ ಕುದುರೆ ಯಾರದ್ದು ಎಂದು ಗುರುತಿಸುವುದು ಹೇಗೆಂಬ ಸಮಸ್ಯೆ ಉದ್ಭವಿಸಿತು.

ಕಿಟ್ಟು: ನಾನು ನನ್ನ ಕುದುರೆಯ ಬಾಲ ಕತ್ತರಿಸುತ್ತೇನೆ. ಆಗ ಸುಲಭವಾಗಿ ಅದನ್ನು ಗುರುತಿಸಬಹುದು.

ಆದರೆ ಮರುದಿನ ಬೆಳಿಗ್ಗೆ ಪುಟ್ಟುವಿನ ಕುದುರೆಯ ಬಾಲವೂ ಕತ್ತರಿಸಲ್ಪಟ್ಟಿತು!

ಕಿಟ್ಟು: ಇಂದು ನಾನು ನನ್ನ ಕುದುರೆಯ ಬಲ ಕಿವಿಯನ್ನು ಕತ್ತರಿಸುತ್ತೇನೆ.

ಮರುದಿನ ಗಮನಿಸಿದಾಗ ಪುಟ್ಟುವಿನ ಕುದುರೆಯ ಬಲ ಕಿವಿಗೂ ಕತ್ತರಿ ಬಿದ್ದಿತ್ತು!

ಇಕ್ಕಟ್ಟಿಗೆ ಬಿದ್ದ ಇಬ್ಬರೂ ತುಂಬಾ ಗಹನವಾಗಿ ಯೋಚಿಸಿ ವಿಚಾರ ಮಾಡಿದ ನಂತರ ಬಿಳಿಯ ಕುದುರೆಯನ್ನು ಕಿಟ್ಟುವೂ, ಕಪ್ಪು ಕುದುರೆಯನ್ನು ಪುಟ್ಟುವೂ ಇಟ್ಟುಕೊಳ್ಳುವುದೆಂದು ನಿರ್ಧರಿಸಿಬಿಟ್ಟರು!

(ಸಂ) ರಮಣ್‌ಶೆಟ್ಟಿ, ರೆಂಜಾಳ್



ಗುಂಡನ ಪತ್ನಿಯನ್ನು ಆಪರೇಶನ್ ಥಿಯೇಟರಿಗೆ ಒಯ್ದಿದ್ದರು. ಹೊರಗೆ ಕಾಯುತ್ತಿದ್ದ ಗುಂಡನ ಬಳಿ ಬಂದ

ನರ್ಸ್: ನಿಮ್ಮ ಸಾಕ್ಸ್ ಬಿಚ್ಚಿ ಕೊಡಿ.

ಗುಂಡ: ಯಾಕೆ ಸಿಸ್ಟರ್?

ನರ್ಸ್: ಇವತ್ತು ಅನಾಸ್ತೇಶಿಯಾ ಡಾಕ್ಟರು ಬಂದಿಲ್ಲ.

(ಸಂ) ಹಾಡ್ಯ, ಬ. ಜಯಾನಂದ


